# ಗ್ರಾಮೀಣಾ ಕೃಷಿ ಯಂತ್ರೋಪಕರಣ / ಸೇವಾ ಕೇಂದ್ರಗಳ ಮಾರ್ಗಸೂಚಿಗಳು

@ @ @

ಗ್ರಾಮೀಣ ಯುವಕರನ್ನು ಕೃಷಿಯ ಕಡೆಗೆ ಆಕರ್ಷಿಸಲು ಮತ್ತು ಸ್ಥಳೀಯವಾಗಿ ಸಣ್ಣ ಕೃಷಿ ಉಪಕರಣಗಳ ತಯಾರಿಕೆ ಸೌಲಭ್ಯದೊಂದಿಗೆ ಕೃಷಿ ಯಂತ್ರಗಳ ಬಳಕೆಯನ್ನು ಪ್ರೋತ್ಸಾಹಿಸಲು ಮತ್ತು ಯುವ ರೈತರನ್ನು ಕೃಷಿಯಲ್ಲೇ ಉಳಿಸಿಕೊಳ್ಳುವಲ್ಲಿ ಅವರಿಗೆ ಉದ್ಯೋಗವಕಾಶ ಸೃಷ್ಠಿಸುವ ನಿಟ್ಟಿನಲ್ಲಿ ಗ್ರಾಮೀಣಾ ಕೃಷಿ ಯಂತ್ರೋಪಕರಣ / ಸೇವಾ ಕೇಂದ್ರಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕೃಷಿ ಯಂತ್ರೋಪಕರಣಗಳು, ಪಂಪುಸೆಟ್‌ಗಳು, ಬೋರ್‌ವೆಲ್‌ಗಳು ಹಾಗೂ ಸೂಕ್ಷ್ಮ ನೀರಾವರಿ ಘಟಕಗಳು ದುರಸ್ತಿಗೆ ಒಳಗಾದಲ್ಲಿ ಇವುಗಳನ್ನು ರಿಪೇರಿ ಮಾಡುವ ಸೌಲಭ್ಯಗಳು ಪ್ರಮುಖವಾಗಿ ಜಿಲ್ಲಾ / ತಾಲೂಕ ಮಟ್ಟದಲ್ಲಿ ಲಭ್ಯವಿದ್ದು, ರೈತರು ಹೋಬಳಿ / ಗ್ರಾಮಗಳಿಂದ ಜಿಲ್ಲಾ ಕೇಂದ್ರಗಳಿಗೆ ಬರಬೇಕಾಗಿರುತ್ತದೆ. ರೈತರಿಗೆ ಈ ಎಲ್ಲಾ ಸೌಲಭ್ಯಗಳನ್ನು ಸ್ಥಳೀಯವಾಗಿ ಒದಗಿಸಲು ಕೃಷಿ ಯಂತ್ರೋಪಕರಣಗಳು, ಪಂಪುಸೆಟ್‌ಗಳು, ಬೋರ್‌ವೆಲ್‌ಗಳು ಹಾಗೂ ಸೂಕ್ಷ್ಮ ನೀರಾವರಿ ಘಟಕಗಳ ದುರಸ್ತಿ ಮಾಡುವಲ್ಲಿ ಪೂರಕ ಸೌಲಭ್ಯಗಳನ್ನು ಸೃಷ್ಠಿಸುವ ಪ್ರಾರಂಭಿಕವಾಗಿ ತಾಲೂಕಿನಲ್ಲಿ ಕೃಷಿ ಚಟುವಟಿಕೆಗಳು ಹೆಚ್ಚು ಇರುವ ಹೋಬಳಿಯಲ್ಲಿ ಗ್ರಾಮೀಣ ಕೃಷಿ ಯಂತ್ರೋಪಕರಣ / ಸೇವಾ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿರುತ್ತದೆ.

1. ಪಟ್ಟಣ ಪಂಚಾಯತಿ, ಮುನಿಸಿಪಲ್ ಮತ್ತು ನಗರ ಪ್ರದೇಶಗಳನ್ನು ಹೊರತುಪಡಿಸಿ, ತಾಲೂಕಿಗೆ ಒಂದರಂತೆ ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ಕೃಷಿ ಯಂತ್ರೋಪಕರಣ / ಸೇವಾ ಕೇಂದ್ರಗಳನ್ನು ಸ್ಥಾಪಿಸುವುದು.
2. ಕಾರ್ಯಕ್ರಮ ಅನುಷ್ಠಾನಕ್ಕಾಗಿ ಪ್ರತಿ ತಾಲೂಕು ಕೇಂದ್ರಕ್ಕೆ ಒಂದರಂತೆ ಕೃಷಿ ಚಟುವಟಿಕೆಗಳು ಹೆಚ್ಚು ಇರುವ ಹೋಬಳಿಯಲ್ಲಿ ಅನುಷ್ಠಾನ ಮಾಡುವುದು.
3. ಕೇಂದ್ರಗಳನ್ನು ಸ್ಥಾಪಿಸಲು ಕನಿಷ್ಠ 20 X 15 ಅಡಿ ಅಳತೆಯ / ಗೋದಾಮು ಇರಬೇಕು.
4. **ವಿದ್ಯಾಹರ್ತೆ :**

   **(ಅ)** ಕೃಷಿ ಇಂಜಿನಿಯರಿಂಗ್ ಡಿಪ್ಲೋಮಾ / ಕೃಷಿಯಲ್ಲಿ ಡಿಪ್ಲೋಮಾ / ಆಟೋಮೋಬೈಲ್ ಡಿಪ್ಲೋಮಾ / ಮೆಕ್ಯಾನಿಕಲ್ ಡಿಪ್ಲೋಮಾ / ಐಟಿಐ / ಪಿ.ಯು.ಸಿ. ತೇರ್ಗಡೆ ಹೊಂದಿರುವ ಗ್ರಾಮೀಣ ಯುವಕರನ್ನು ಈ ಯೋಜನೆಗೆ ಪರಿಗಣಿಸತಕ್ಕದ್ದು.

   **(ಆ)** ಕೃಷಿ ವಿಶ್ವವಿದ್ಯಾನಿಲಯದಿಂದ ಕೃಷಿ ಯಂತ್ರೋಪಕರಣಗಳ ದುರಸ್ತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ತರಬೇತಿ ಪಡೆದಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು ಹಾಗೂ ರೈತ ಕುಟುಂಬಕ್ಕೆ ಸೇರಿದವರಾಗಿರತಕ್ಕದ್ದು.
5. ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಸ್ಥಳೀಯ ಅಭ್ಯರ್ಥಿಗಳನ್ನು ಪರಿಗಣಿಸುವುದು ಹಾಗೂ ಅಭ್ಯರ್ಥಿಗಳ ವಯಸ್ಸು ಕನಿಷ್ಠ 18 ವರ್ಷ ಮತ್ತು ಗರಿಷ್ಠ 45 ವರ್ಷ ಮೀರಿರಬಾರದು.

6. ಕೇಂದ್ರಗಳಲ್ಲಿ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಪಂಪ್‌ಸೆಟ್, ಸಸ್ಯ ಸಂರಕ್ಷಣೆ ಉಪಕರಣಗಳು, ಸೂಕ್ಷ್ಮ ನೀರಾವರಿ ಘಟಕಗಳು ಮತ್ತು ಬೋರವೆಲ್ ಗಳ ದುರಸ್ತಿಗಳನ್ನೊಳಗೊಂಡಂತೆ ಕೃಷಿ ಚಟುವಟಿಕೆಗಳಿಗೆ ಬೇಕಾದ ಎಲ್ಲಾ ಯಂತ್ರೋಪಕರಣಗಳ ದುರಸ್ತಿಯನ್ನು ಮಾಡುವುದು.

7. ಕೇಂದ್ರಗಳಲ್ಲಿ ಯಂತ್ರೋಪಕರಣಗಳ ದುರಸ್ತಿಗೆ ಬೇಕಾದ Tool kit, Grinding Machine, Hand Drilling Machine, Welding Machine, Spot Welding Machine, Cutting Machine, Air Compressor, Bearing Puller ಹಾಗೂ ಇತರೆ ಅವಶ್ಯವಿರುವ ಉಪಕರಣಗಳನ್ನು ಹೊಂದಿರಬೇಕಾಗಿರುತ್ತದೆ.

8. ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಶೇ 50 ರಷ್ಟು ಗರಿಷ್ಠ ರೂ 5.00 ಲಕ್ಷಗಳು ಮತ್ತು ಪ.ಜಾತಿ ಹಾಗೂ ಪ.ಪಂಗಡ ಫಲಾನುಭವಿಗಳಿಗೆ ಶೇ 75 ರಷ್ಟು ಅಥವಾ ಗರಿಷ್ಠ ರೂ 7.50 ಲಕ್ಷಗಳ ಮಿತಿಯೊಳಗೆ ಇವೆರಡರಲ್ಲಿ ಯಾವುದು ಕಡಿಮೆಯೋ ಅದನ್ನು ಸಹಾಯಧನವನ್ನಾಗಿ ಬ್ಯಾಂಕ್ ಲೋನ್ ಆಧಾರದ ಮೇರೆಗೆ ಒಂದು ಬಾರಿ (Back Ended Subsidy) ನೀಡುವುದು. ಮೀಸಲಾತಿ ಈ ಕೆಳಕಂಡಂತೆ ಇರುತ್ತದೆ.

| ತಾಲೂಕ | ವರ್ಗ |
|---|---|
| ಕೊಪ್ಪಳ | ಸಾಮಾನ್ಯ |
| ಕುಷ್ಟಗಿ | ಸಾಮಾನ್ಯ |
| ಯಲುಗಾ | ಪರಿಶಿಷ್ಟ ಜಾತಿ |
| ಗಂಗಾವತಿ | ಪರಿಶಿಷ್ಟ ಪಂಗಡ |

9. ಪ್ರೋತ್ಸಾಹ ಧನವನ್ನು ಪಡೆಯಲು ರಾಷ್ಟ್ರೀಕೃತ ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು (Regional Rural Bank) ರಾಜ್ಯ ಸಹಕಾರಿ, ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ಗಳು, Scheduled Commercial Bank, Co-Operative Bank, NABARD ಇವುಗಳಿಂದ ಸಾಲ ಪಡೆಯಬೇಕು. ಅನುದಾನ ಲಭ್ಯತೆಗೆ ಅನುಗುಣವಾಗಿ ಪ್ರೋತ್ಸಾಹ ಧನವನ್ನು ನೀಡಲಾಗುವುದು.

10. ಆಯ್ಕೆಯಾದ ಅಭ್ಯರ್ಥಿಯು ಗ್ರಾಮೀಣ ಕೃಷಿ ಯಂತ್ರೋಪಕರಣ / ಸೇವಾ ಕೇಂದ್ರಗಳ ಸ್ಥಾಪನೆಗೆ ಸಂಬಂಧಿಸಿದಂತೆ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು ಹಾಗೂ ಈ ಕೇಂದ್ರಗಳ ಕನಿಷ್ಠ 6 ವರ್ಷಗಳ ತನಕ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು.

# ಅರ್ಜಿ ನಮೂನೆ-1

| | | | |
|---|---|---|---|
| 1 | ಅಭ್ಯರ್ಥಿಯ ಹೆಸರು | | |
| 2 | ತಂದೆಯ ಹೆಸರು | | |
| 3 | ಸರ್ವೇ ನಂ ಮತ್ತು ವಿಸ್ತೀರ್ಣ (ದೃಢೀಕೃತ ಪಹಣಿ ಲಗತ್ತಿಸಿ) | | |
| 4 | ಜನ್ಮ ದಿನಾಂಕ (ದೃಢೀಕೃತ ಎಸ್.ಎಸ್.ಎಲ್.ಸಿ. ಪ್ರಮಾಣ ಪತ್ರ ಲಗತ್ತಿಸಿ) | | |
| 5 | ವಿಳಾಸ (Permanent Address) | | |
| | ಗ್ರಾಮ & ಗ್ರಾಮ ಪಂಚಾಯತಿ | | |
| | ತಾಲೂಕು | | |
| | ಜಿಲ್ಲೆ | | |
| | ಪಿನ್ ಕೋಡ್ ಸಂಖ್ಯೆ | | |
| 6 | ಪತ್ರ ವ್ಯವಹರಿಸಲು ಅಂಚೆ ವಿಳಾಸ | | |
| 7 | ವಿಧ್ಯಾರ್ಹತೆ (ದೃಢೀಕೃತ ಪ್ರಮಾಣ ಪತ್ರಗಳನ್ನು ಮತ್ತು ಅಂಕ ಪಟ್ಟಿಯನ್ನು ಲಗತ್ತಿಸಿ) | | |
| ಅ | 1 | ಕೃಷಿ ಇಂಜಿನಿಯರಿಂಗ್ ಡಿಪ್ಲೋಮಾ | |
| | 2 | ಕೃಷಿಯಲ್ಲಿ ಡಿಪ್ಲೋಮಾ | |
| | 3 | ಆಟೋಮೊಬೈಲ್ ಡಿಪ್ಲೋಮಾ | |
| | 4 | ಮೆಕ್ಯಾನಿಕಲ್ ಡಿಪ್ಲೋಮಾ | |
| | 5 | ಐ ಟಿ ಐ | |
| | 6 | ಪಿ.ಯು.ಸಿ. ತೇರ್ಗಡೆಯಾಗಿರಬೇಕು | |
| ಆ | ಕೃಷಿ ವಿಶ್ವವಿದ್ಯಾನಿಲಯದಿಂದ ಕೃಷಿ ಯಂತ್ರೋಪಕರಣಗಳ ದುರಸ್ತಿ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ತರಬೇತಿ (ದೃಢೀಕೃತ ಪ್ರಮಾಣ ಪತ್ರ ಲಗತ್ತಿಸಿ) | | |
| 8 | ಜಾತಿ : (ಸಾಮಾನ್ಯ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ) ಪ.ಜಾ / ಪ.ವರ್ಗದವರು ದೃಢೀಕೃತ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಿ) | | |
| 9 | ಕನಿಷ್ಠ 20*15 ಅಡಿ ಅಳತೆಯ ಕೊಠಡಿ / ಗೋದಾಮು ಹೊಂದಿರುವ ಬಗ್ಗೆ ಅಗತ್ಯ ದಾಖಲಾತಿಗಳು | | |
| 10 | ದೂರವಾಣಿ ಸಂಖ್ಯೆ | | |
| 11 | ಇ-ಮೇಲ್ ವಿಳಾಸ | | |

ಸ್ಥಳ :

ದಿನಾಂಕ :

ಸಹಿ :

ಹೆಸರು :